**ಸಿ.ಸಿ. ನಂ. 289/2018**

**ಸಾಕ್ಷಿಃ ಸಿ.ಡಬ್ಲ್ಯೂ 10 ಪಿ.ಡಬ್ಲ್ಯೂಃ 6**

ಸಾಕ್ಷಿದಾರನ ಹೆಸರು : ಗೋವಿಂದಪ್ಪ

ತಂದೆಯ ಹೆಸರು : ಲೇಟ್ ನಿಂಗಪ್ಪ

ವಯಸ್ಸು : 66 ವರ್ಷ

ಉದ್ಯೋಗ : ನಿವೃತ್ತ ಎ ಎಸ್ ಐ

ವಾಸಸ್ಥಳ : ನೇರಲಿಗೆರೆ

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ07-02-2026**

**ಮುಖ್ಯ ವಿಚಾರಣೆಃ** ಎಪಿಪಿಯವರಿಂದ,

ನಾನು 2017 ರಿಂದ 2020 ಮೇ ರವರೆಗೆ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 04-04-2018 ರಂದು ನಾನು ಠಾಣಾ ಎಸ್ ಹೆಚ್ ಒ ಕರ್ತವ್ಯದಲ್ಲಿ ಇದ್ದಾಗ ಚಾಸಾ-1 ರವರಿಂದ ವರದಿ, ಮಹಜರ್ ಮತ್ತು ಅಮಾನತ್ತು ಪಡಿಸಿಕೊಂಡ ಸ್ವತ್ತುಗಳನ್ನು ಸ್ವೀಕರಿಸಿ ಠಾಣಾ ಗುನ್ನಾ ನಂ. 116/2018 ಕಲಂ 32, 34 ಕರ್ನಾಟಕ ಅಬಕಾರಿ ಕಾಯ್ದೆ ರಡಿ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ.

ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಅಮಾನತ್ತು ಪಡಿಸಿಕೊಂಡಿದ್ದ **180** ಎಂ ಎಲ್ ಓಲ್ಡ್ ಟವರಿನ್ ವಿಸ್ಕಿ **5** ಸ್ಯಾಚೆಟ್ ಗಳು, **90** ಎಂ ಎಲ್ ನ ರಾಜಾ ವಿಸ್ಕಿ **10**ಸ್ಯಾಚೆಟ್ ಗಳು, **90** ಎಂ ಎಲ್ ನ ಅಮೃತ್ ಸಿಲ್ವರ್ ಕಪ್ ಬ್ರಾಂಡಿ **10** ಸ್ಯಾಚೆಟ್ ಗಳ ಪೈಕಿ ತಲಾ ಒಂದರಂತೆ ರಾಸಾಯಿಕ ಪರೀಕ್ಷೆಗೆ ಮಾದರಿ ತೆಗೆದು ಬಿಳಿ ಚೀಲದಲ್ಲಿ ಒ ಎಂಬ ಇಂಗ್ಲೀಷ್ ಅಕ್ಷರಿದಿಂದ ಸೀಲು ಮಾಡಿರುತ್ತೇವೆ.

ದಾಳಿ ಸಮಯದಲ್ಲಿ ಪಂಚರ ಸಹಿ ಪಡೆದುಕೊಂಡಿರುತ್ತೇನೆ. ಚಾಸಾ-**2** ರಿಂದ **6** ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಚಾಸಾ-**9** ರವರನ್ನು ಎಫ್ ಎಸ್ ಎಲ್ ಪರೀಕ್ಷೆಗೆ ಮಾದರಿ ತೆಗೆದ ಸ್ವತ್ತುಗಳೊಂದಿಗೆ ಕಳುಹಿಸಿರುತ್ತೇನೆ. ದಿಃ**26-06-2018** ರಂದು ಪರೀಕ್ಷಾ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ಆರೋಪಿ ವಿರುದ್ಧ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿ ನಿಪಿ-1 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1ಡಿ ಎಂದು ಗುರುತಿಸಲಾಯಿತು.

ಸಾಕ್ಷಿ ಪ್ರ.ವ.ವ. ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–6 ಎಂದು ಸಾಕ್ಷಿ ಸಹಿಯನ್ನು ನಿಪಿ–6ಎ ಎಂದು ಗುರುತಿಸಲಾಯಿತು.

ಸಾಕ್ಷಿ ಎಫ್ ಎಸ್ ಎಲ್ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–7 ಎಂದು ಸಾಕ್ಷಿ ಸಹಿಯನ್ನು ನಿಪಿ–7ಎ ಎಂದು ಗುರುತಿಸಲಾಯಿತು.

ಸಾಕ್ಷಿ ಎಂಒ–1 ರಿಂದ 3 ನ್ನು ನೋಡಿ ಗುರುತಿಸುತ್ತಾರೆ. ಆರೋಪಿ ಗೈರು ಹಾಜರಿದ್ದು ನೋಡಿದರೆ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ.

**<u>ಪಾಟೀ ಸವಾಲು</u>: ಆರೋಪಿ ಪರ ಕೆ ಎಲ್ ಎನ್ ವಕೀಲರಿಂದ**

ಚಾಸಾ–1 ದೂರು ನೀಡಲು ಸಂಜೆ 4.00 ಗಂಟೆಗೆ ಬಂದಿದ್ದರು. ಚಾಸಾ–1 ರವರೆ ಖುದ್ದಾಗಿ ಬಂದಿದ್ದರು. ನಿಪಿ–1 ದೂರನ್ನು ಠಾಣೆಯಲ್ಲಿ ಟೈಪ್ ಮಾಡಲಾಗಿರುತ್ತದೆ. ಈ ಮೊದಲೇ ದೂರನ್ನು ಟೈಪ್ ಮಾಡಿಕೊಂಡು ಬಂದಿದ್ದರು. ದೂರನ್ನು ಸ್ವೀಕರಿಸಿದ ನಂತರ ಘಟನಾ ಸ್ಥಳಕ್ಕೆ ನಾನು ಹೋಗಿರುವುದಿಲ್ಲ. ಪಂಚರಿಗೆ ನೋಟೀಸು ಕೊಟ್ಟು ಹೇಳಿಕೆ ನೀಡಲು ಠಾಣೆಗೆ ಬರುವಂತೆ ತಿಳಿಸಿರುತ್ತೇನೆ. ನೋಟೀಸು ಕೊಟ್ಟಿಲ್ಲ ಆದರೆ ಪೋನ್ ಮೂಲಕ ತಿಳಿಸಿರುತ್ತೇನೆ.

ನಾನು ಸಾಕ್ಷಿದಾರರ ಹೇಳಿಕೆ ದಾಖಲಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಸ್ವತ್ತುಗಳನ್ನು ಎಫ್ ಎಸ್ ಎಲ್ ಗೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಸರಿಯಾದ ರೀತಿ ತನಿಖೆ ಮಾಡದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲೀಗು ಪ್ರಕರಣಕ್ಕೂ ಮತ್ತು ಆರೋಪಿಗು ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಎಂಒ–1 ಮತ್ತು ರ ಮೇಲೆ ಸೀಲನ್ನು ಸ್ಥಳದಲ್ಲಿ ಅಂಟಿಕೊಂಡು ಬಂದಿದ್ದರು. ಪಂಚರು ನನ್ನ ಸಮಕ್ಷಮ ಸಹಿ ಮಾಡಿರಲಿಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾ.ದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಅದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ನ್ಯಾಯಾಲಯ ಬೇಲೂರು